# ಪಿ.ಯು.ಸಿ. ದ್ವಿತೀಯ ವರ್ಷ ಐಚ್ಛಿಕ ಕನ್ನಡ ಪಠ್ಯ ಪರಿಷ್ಕರಣ ಪಠ್ಯ ಪುಸ್ತಕ ರಚನೆ – 2014
## ಪಠ್ಯ ಸೂಚಿಯ ವಿವರ

| ಅ.ನಂ. | ಘಟಕ | ಉಪ ಘಟಕ ಉಪಶೀರ್ಷಿಕೆ | ಅವಧಿ | ಉದ್ದಿಷ್ಟ | ಕಲಿಕೆಯ ಫಲಿತ | ಜ್ಞಾನ ನಿರ್ಧಾರ | ಚಟುವಟಿಕೆ |
|---|---|---|---|---|---|---|---|
| ೧. | ಚಂಪುಕಾವ್ಯ ಪಂಪಕವಿಯ ಆದಿಪುರಾಣ | ಪೊಸಯಿಸಿದಳಾಕೆ ನಾಟ್ಯಾಂಗಮಮಂ (ನೀಲಾಂಜನೆಯ ನೃತ್ಯ) | ೧೨ | ಪ್ರಾಚೀನ, ಸಂಗೀತ, ತಾಳ, ಲಯ, ನೃತ್ಯ, ರಸ ಹಾಗೂ ಭಾವ ಪರಿಚಯಿಸುವದು ಮತ್ತು ಬದುಕಿನ ಕ್ಷಣಭಂಗುರತೆಯನ್ನು ತಿಳಿಸಿ ಸನ್ಮಾರ್ಗದತ್ತ ನಡೆಯಲು ಪ್ರೇರೆಪಿಸುವುದು. | ನೃತ್ಯ, ಸಂಗೀತ, ಕಾವ್ಯ ಮುಂತಾದ ಕಲೆಗಳ ಪರಸ್ಪರ ಸಂಬಂಧದ ಪರಿಚಯ ಮತ್ತು ಸಾಂಸ್ಕೃತಿಕ ಅಭಿರುಚಿಯ ಬೆಳವಣಿಗೆ | ನೇರ ಪ್ರಶ್ನೆಗಳ ಮೂಲಕ ಜ್ಞಾನವನ್ನು ನಿರ್ಧರಿಸುವುದು. ಪದ್ಯದ ಭಾವಾರ್ಥವನ್ನು ವಿವರಿಸಲು ಹೇಳಿ, ಹಾಗೂ ಹೊಸಗನ್ನಡಕ್ಕೆ ಅನುವಾದಿಸಲು ಹೇಳಿ ಅಭಿವ್ಯಕ್ತಿ ಸಾಮರ್ಥ್ಯ ಹಾಗೂ ಭಾಷಾ ಕೌಶಲ್ಯವನ್ನು ಪರೀಕ್ಷಿಸುವುದು. | ನೃತ್ಯದ ವಿವಿಧ ಪ್ರಕಾರಗಳನ್ನು ತಿಳಿದುಕೊಳ್ಳಲು ಹೇಳುವುದು ಹಾಗೂ ಅಭಿನಯಿಸುವುದು. ಜಾನಪದ ನೃತ್ಯಗಳನ್ನು ಮಾಡಲು ತಿಳಿಸುವುದು. |
| ೧ಅ | ಚಂಪು ಕಾವ್ಯ ಷಡಕ್ಷರ ಕವಿಯ ಶಬರಶಂಕರ ವಿಳಾಸ | ಸೌಜನ್ಯವಿದೂರನಾದೆನಕಟಾ | ೧೨ | ಮಾನವನಲ್ಲಿ ಗರ್ವ, ಕೋಪ ಮೈದಳೆದರೆ ಅದು ಆತನ ಸೋಲಿಗೆ ಕಾರಣವಾಗುತ್ತದೆ. ವಿದ್ಯೆಗೆ ವಿನಯವು ಬೇಕು. ಪರಾಕ್ರಮದಲ್ಲೂ ಸೌಜನ್ಯವಿರಬೇಕು ಎಂಬುದನ್ನು ಕಲಿಸುವುದು. | ಶಕ್ತಿ, ಸಾಮರ್ಥ್ಯವಿದ್ದರೂ ತನಗಿಂತಲೂ ಶಕ್ತಿ, ಸಾಮರ್ಥ್ಯವುಳ್ಳವರು ಇದ್ದೇ ಇರುತ್ತಾರೆ ಎಂಬುದರ ಅರಿವು ಮೂಡುವುದು ಅಹಂಕಾರ ಒಳ್ಳೆಯದಲ್ಲವೆಂಬ ತಿಳಿವಳಿಕೆ ಮೂಡುವುದು ಹಾಗೂ ಚಂಪು ಸಾಹಿತ್ಯದ ವೈಶಿಷ್ಟ್ಯ ತಿಳಿಯುವುದು | ನೇರ ಪ್ರಶ್ನೆಗಳ ಹಾಗೂ ವಿಷಯದ ಗ್ರಹಿಕೆಯನ್ನು ಪರೀಕ್ಷಿಸಲು ಹೇಳುವುದರ ಮೂಲಕ ಜ್ಞಾನ ನಿರ್ಣಯಿಸುವುದು. ಪದ್ಯಗಳ ಸಾರ ಮತ್ತು ಭಾವಗಳನ್ನು ವಿವರಿಸಲು ಹೇಳುವ ಮೂಲಕ ಅಭಿವ್ಯಕ್ತಿ ಸಾಮರ್ಥ್ಯ ಪರೀಕ್ಷಿಸುವುದು. | ಹಳೆಗನ್ನಡ ಸಂಭಾಷಣೆಯ ರೂಪದಲ್ಲಿಯೇ ಪಠ್ಯವನ್ನು ಸಾಭಿನಯವಾಗಿ ಪ್ರದರ್ಶಿಸಲು ತಿಳಿಸುವುದು. |
| ೨. | ರಗಳೆ ಹರಿಹರನ ಕುಂಬರ ಗುಂಡಯ್ಯನ ರಗಳೆ | ಆಡಿದನಾಡಿದನಾಹಾ ಶಂಕರ | ೧೧ | ಕಾಯಕದಿಂದಲೇ ಬದುಕಿನ ಸಾರ್ಥಕತೆ, ಕಾಯಕ ಮಾಡುವಲ್ಲಿ ಎಲ್ಲರೂ ಒಂದೇ. ದೇವರ ದೃಷ್ಟಿಯಲ್ಲಿ ಮೇಲು, ಕೀಳು ಎಂಬ ಭಾವನೆಯಿಲ್ಲ ಎಲ್ಲರೂ ಸಮಾನರು ಎಂಬ ತತ್ವವನ್ನು ಈ ಪಠ್ಯದ ಮೂಲಕ ವಿದ್ಯಾರ್ಥಿಗಳಿಗೆ ಸ್ಪಷ್ಟ ಪಡಿಸುವುದು. | ದೇವರ ಒಲುಮೆಗೆ ನಿಷ್ಕಲ್ಮಷವಾದ ಭಕ್ತಿಯೇ ಮುಖ್ಯ ಎಂಬುದನ್ನು ಈ ಪದ್ಯದ ಮೂಲಕ ತಿಳಿಯುತ್ತಾರೆ. ಕಾಯಕ ನಿಷ್ಠೆಯ ಮೂಲಕವೇ ದೇವರನ್ನು ಸಾಕ್ಷಾತ್ಕರಿಸಿಕೊಳ್ಳುವುದು ಎಂಬುದನ್ನು ತಿಳಿದುಕೊಳ್ಳುತ್ತಾರೆ. | ನೇರ ಪ್ರಶ್ನೆಗಳ ಮೂಲಕ ಜ್ಞಾನ ಪರೀಕ್ಷೆ, ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯುವ ಪ್ರಶ್ನೆಗಳ ಮೂಲಕ ಅಭಿವ್ಯಕ್ತಿಯ ಮೌಲ್ಯಮಾಪನ ಕಥಾಸಂದರ್ಭವನ್ನು, ಸ್ವಾರಸ್ಯವನ್ನು ಗ್ರಹಿಸುವ ಪ್ರಶ್ನೆಗಳ ಮೂಲಕ ಅಭಿವ್ಯಕ್ತಿಯ ಮೌಲ್ಯಮಾಪನ ಮಾಡುವುದು. | ಹರಿಹರನ ರಗಳೆಗಳ ಕಾವ್ಯದ ಲಯ ಗೇಯತೆಯನ್ನು ನೃತ್ಯರೂಪದಲ್ಲಿ ಅಳವಡಿಸುವ ಮೂಲಕ ಮಕ್ಕಳನ್ನು ಕ್ರಿಯಾಶೀಲವಾಗಿ ತೊಡಗಿಸಿಕೊಳ್ಳುವಂತೆ ಮಾಡುವುದು. |

| ಅ.ನಂ. | ಘಟಕ | ಉಪ ಘಟಕ ಉಪಶೀರ್ಷಿಕೆ | ಅವಧಿ | ಉದ್ದಿಷ್ಟ | ಕಲಿಕೆಯ ಫಲಿತ | ಜ್ಞಾನ ನಿರ್ಧಾರ | ಚಟುವಟಿಕೆ |
|---|---|---|---|---|---|---|---|
| ೩. | ಷಟ್ಪದಿ ಚಾಮರಸನ ಪ್ರಭುಲಿಂಗ ಲೀಲೆ | ಕಾಳುಮತಿಗಳಿಗೆನಿತು ಬುದ್ಧಿಯ ಹೇಳಿದರೆ ಫಲವೇನು? | ೧೧ | ಬದುಕಿನ ಪ್ರಲೋಭನೆಗಳನ್ನು ಎದುರಿಸಿ ಗೆಲ್ಲುವ ಛಲವನ್ನು ಬೆಳೆಸುವುದು ಆಕರ್ಷಣೆಗೆ ಒಳಗಾಗದೆ ಮುಂದೆ ಸಾಗುವುದನ್ನು ತಿಳಿಸುವುದು. | ಆಮಿಷಗಳೆದುರಾದಾಗ ಹೇಗೆ ಅವುಗಳನ್ನು ಮೀರಿ ನಿಲ್ಲಬೇಕೆಂಬುದನ್ನು ಮನದಟ್ಟು ಮಾಡಿಕೊಡುತ್ತದೆ. | ನಡುಗನ್ನಡ ಪದ್ಯಗಳ ಭಾವಾರ್ಥ ಬರೆಯುವುದರ ಮೂಲಕ ಅಭಿವ್ಯಕ್ತಿಸಾಮರ್ಥ್ಯ ನಿರ್ಣಯಿಸುವುದು ಭಾಷಾಭ್ಯಾಸದ ಮೂಲಕ ಜ್ಞಾನವನ್ನು ಪರೀಕ್ಷಿಸುವುದು. | ಕಾವ್ಯಭಾಗವನ್ನು ಸಂಭಾಷಣೆಗೆ ಅಳವಡಿಸಲು ಹೇಳುವುದರ ಮೂಲಕ ಸೃಜನ ಶೀಲತೆಯನ್ನು ಉದ್ದೀಪಿಸುವುದು. |
| ೪. | ಶತಕ ಚಿಕುಪಾಧ್ಯಾಯ ನೀತಿಶತಕ | ಕೊಲ್ಲುವುದು ಧರ್ಮವೇ ಕಳುವುದು ನೀತಿಯೇ? | ೧೦ | ಬೆಳೆವ ಮನಸ್ಸುಗಳಲ್ಲಿ ಉದಾತ್ತವಾದ ವಿಚಾರಗಳನ್ನು ಬಿತ್ತುವುದು. ಯಾವುದು ಸಾಧು, ಯಾವುದು ಅಸಾಧು ಎಂಬ ಪರಿಕಲ್ಪನೆಯನ್ನೊದಗಿಸುವುದು ಭೇಧ-ಭಾವವನ್ನು ಅಳಿಸುವುದು | ಮೌಲ್ಯಗಳ ಸ್ವೀಕರಣ ಅಪಮೌಲ್ಯಗಳ ನಿರಾಕರಣದ ಬಗ್ಗೆ ಸ್ಪಷ್ಟಕಲ್ಪನೆ ಮೂಡುತ್ತದೆ. ಒಳಿತು ಕೆಡುಕಿನ ವ್ಯತ್ಯಾಸ ಅರಿವಾಗಿ ವ್ಯಕ್ತಿತ್ವ ಉನ್ನತಿಗೆ ಸಹಾಯವಾಗುತ್ತದೆ. | ನೇರ ಪ್ರಶ್ನೆಗಳ ಮೂಲಕ ಜ್ಞಾನ, ವಿವರಣಾತ್ಮಕ ಪ್ರಶ್ನೆಗಳ ಮೂಲಕ ಅಭಿವ್ಯಕ್ತಿ ಸಾಮರ್ಥ್ಯ ಪರೀಕ್ಷಿಸುದು. | ೧) ಗ್ರಾಮೀಣ ಪರಿಸರದ ಹಿರಿಯರ ನೀತಿಮಾತು ಸಂಗ್ರಹಿಸುವುದು<br>೨) ರತ್ನಾಕರವರ್ಣಿ ಸೋಮೇಶ್ವರ ಮುಂತಾದವರ ಶತಕಗಳನ್ನು ಅಭ್ಯಸಿಸುವುದು. |
| ೫. | ತ್ರಿಪದಿ ಸರ್ವಜ್ಞ | ಹಸನಾಗಿ ದುಡಿದರೆ... | ೦೯ | ಕುಲದಹುಸಿತನ, ಲೋಭದುರ್ವ್ಯಸನಗಳ ಕೇಡನ್ನು ಮನವರಿಕೆ ಮಾಡಿಕೊಡುವುದು ಇಂದ್ರಿಯ ನಿಗ್ರಹ, ಕಠಿಣಪರಿಶ್ರಮ, ಕಾಯಕ ನಿಷ್ಠೆ, ಸ್ತ್ರೀ ಗೌರವ ಇತ್ಯಾದಿ ಮೌಲ್ಯಗಳನ್ನು ಬಿತ್ತುವುದು. | ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗುವ ಮೌಲ್ಯಗಳ ಮನವರಿಕೆ. ಕಾಯಕ ನಿಷ್ಠೆ ಲೋಕಪ್ರೀತಿ, ಸರ್ವಸಮಭಾವದ ವಿಚಾರಗಳ ಅಳವಡಿಕೆ ಮೂಡುತ್ತದೆ. | ಸಂದರ್ಭಸೂಚಿಸುವ ಪ್ರಶ್ನೆಗಳು ಹಾಗೂ ವಿವರಣಾತ್ಮಕ ಪ್ರಶ್ನೆಗಳ ಮೂಲಕ ಪಠ್ಯದ ಗ್ರಹಿಕೆಯನ್ನು ಪರೀಕ್ಷಿಸುವುದು. ಮತ್ತು ಅಭಿವ್ಯಕ್ತಿಯ ಕುಶಲತೆಯನ್ನು ನಿರ್ಧರಿಸುವುದು. | • ಸರ್ವಜ್ಞನ ತ್ರಿಪದಿಗಳು ಹಾಗೂ ಜನಪದ ತ್ರಿಪದಿಗಳನ್ನು ವಿವಿಧ ಮಟ್ಟುಗಳಲಿ ಹಾಡಲು ಪ್ರೇರೆಪಿಸುವುದು.<br>• ವಿದ್ಯಾರ್ಥಿಗಳ ಪರಿಸರದಲ್ಲಿರುವ ತ್ರಿಪದಿಗಳನ್ನು ಸಂಗ್ರಹಿಸಲು ತಿಳಿಸುವುದು. |
| ೬. | ಸಾಂಗತ್ಯ ಸಂಚಿಯ ಹೊನ್ನಮ್ಮ | ನೇಮದೊಳು ನೆಲಸುವುದು | ೧೦ | ಹೆಣ್ಣೆಂದರೆ ಮೂಗು ಮುರಿಯುವ ಪ್ರವೃತ್ತಿ ಹೋಗಲಾಡಿಸುವುದು, ಗಂಡು-ಹೆಣ್ಣುಗಳೆಂಬ ತಾರತಮ್ಯ ಭಾವವನ್ನು ತೊಡೆದು ಹಾಕುವುದು ಅಲ್ಲದೆ ಸರಸ ಜನನ ವಿರಸ ಮರಣ ಸಮರಸವೇ ಜೀವನವಾಗಬೇಕೆಂಬ ವಿಚಾರ ಮತ್ತು ಕೌಟುಂಬಿಕ ಮೌಲ್ಯಗಳನ್ನು ಎತ್ತಿಹಿಡಿಯುವುದು. | ಸ್ತ್ರೀ ಪುರುಷ ಸಮಾನತೆಯ ಕಲ್ಪನೆ ಬರುತ್ತದೆ ಹಾಗೂ ಕೌಟುಂಬಿಕ ಮೌಲ್ಯಗಳ ಅರಿವಾಗುತ್ತದೆ. | ಛಂದೋರೂಪ ಗುರುತಿಸಲು ತಿಳಿಸುವುದರ ಮೂಲಕ ಜ್ಞಾನ ನಿರ್ಧಾರ, ಪದ್ಯದ ಸ್ವಾರಸ್ಯ ವಿವರಿಸಲು ಹೇಳುವ ಮೂಲಕ ಅಭಿವ್ಯಕ್ತಿ ಸಾಮರ್ಥ್ಯದ ಪರೀಕ್ಷೆ | ೧. ಮುದ್ದಣ ಮನೋರಮೆಯ ಸಲ್ಲಾಪ ಹಾಗೂ ಶುಕ ಸಂಭಾಷಣೆ ಪಾತ್ರ ನಿರ್ಮಿತಿಯ ಬಗ್ಗೆ ಚರ್ಚಿಸಿ ಸಾಭಿನಯವಾಗಿ ಪ್ರದರ್ಶಿಸಲು ಸೂಚಿಸುವುದು.<br>೨. ಜನಪದರಲ್ಲಿರುವ ಕೌಟುಂಬಿಕ ಸರಸ-ಸಾಮರಸ್ಯದ ಹಾಡುಗಳನ್ನು ಸಂಗ್ರಹಿಸಲು ಉತ್ತೇಜಿಸುವುದು. |

| ಕ್ರ.ಸಂ. | ಘಟಕ | ಉಪ ಘಟಕ ಉಪಶೀರ್ಷಿಕೆ | ಅವಧಿ | ಉದ್ದಿಷ್ಟ | ಕಲಿಕೆಯ ಫಲಿತ | ಜ್ಞಾನ ನಿರ್ಧಾರ | ಚಟುವಟಿಕೆ |
|---|---|---|---|---|---|---|---|
| ೭. | ಕಥನ ಕವನ ಸು.ರಂ. ಎಕ್ಕುಂಡಿ | ನಾಗಿಯ ಕಥೆ | ೦೬ | ಕಥನ ಕವನಗಳನ್ನು ಪರಿಚಯಿಸುವುದು ಯುವ ಮನಸ್ಸುಗಳು ಯೌವನದ ಸಹಜ ಆಕರ್ಷಣೆಗೆ ಒಳಗಾಗಿ ತಲ್ಲಣಕ್ಕೀಡಾಗುವುದನ್ನು ಕವನದ ಉದಾಹರಣೆಯೊಂದಿಗೆ ತಿಳಿಸುವುದು ಮತ್ತು ಹಾಗಾಗದಂತೆ ದೃಢ ಮನಸ್ಥಿತಿಯನ್ನು ಹೊಂದಲು ಸೂಚಿಸುವುದು. | ದೈಹಿಕ ಆಕರ್ಷಣೆಗೆ ಒಳಗಾಗದಂತೆ, ಭಾವನೆಗಳಿಗೆ ಬಲಿಯಾಗದಂತೆ ಅತೀಂದ್ರಿಯ ಸುಖವೇ ನಿಜವಾದ ಸುಖವೆಂದು ಭಾವಿಸುವುದು. | ಕಥನ ಕವನಗಳ ನೇರ ಹಾಗೂ ವಿವರ ಪ್ರಶ್ನೆಗಳ ಮೂಲಕ ವಿದ್ಯಾರ್ಥಿಗಳ ಅಭಿವ್ಯಕ್ತಿ ಸಾಮರ್ಥ್ಯ ಪರೀಕ್ಷಿಸುವುದು. | ಕನ್ನಡ ಸಾಹಿತ್ಯದಲ್ಲಿ ಬರುವ ಇತರ ಕಥನ ಕವನಗಳನ್ನು ಸಂಗ್ರಹಿಸಲು ಸೂಚಿಸುವುದು. |
| ೮. | ನಾಟಕ ಕುವೆಂಪು | ಜಲಗಾರ | ೨೨ | ಶ್ರಮಿಕ ವರ್ಗದ ಬಗ್ಗೆ ಗೌರವ ಮೂಡಿಸುವುದು. ಮೌಢ್ಯತೆಯನ್ನು ನಿವಾರಿಸಿ ವೈಜ್ಞಾನಿಕ ಮತ್ತು ವೈಚಾರಿಕ ಮನೋಧರ್ಮ ಬೆಳೆಸುವುದು. ಪರಿಸರ ಮತ್ತು ಪ್ರಕೃತಿ ಬಗ್ಗೆ ಆಸಕ್ತಿ ಮೂಡಿಸಿ ಅದನ್ನು ತೆರೆದ ಮನಸ್ಸಿನಿಂದ ನೋಡುವಂತೆ ಪ್ರೇರೇಪಿಸುವುದು ಬಡವರ ನೋವು ನಲಿವುಗಳನ್ನು ಮುಕ್ತಮನಸ್ಸಿನಿಂದ ಆಲಿಸಿ ಅವುಗಳಿಗೆ ಸ್ಪಂದಿಸುವಂತೆ ಅಣಿಗೊಳಿಸುವುದು. | ಶ್ರಮಿಕ ವರ್ಗದವರ ಬಗ್ಗೆ ಇರುವ ಅಸಹನೆಯ ನಿವಾರಣೆ, ಬಡವರ ಬಗ್ಗೆ ಇರುವ ನಿರ್ಲಕ್ಷ್ಯ ಮನೋಭಾವನೆ ಸ್ಥಗಿತ ಸಾಮಾಜಿಕ ಕಳಕಳಿ, ಪ್ರಕೃತಿ ಪ್ರೇಮ ಬೆಳೆಸುವಿಕೆ, ಮೌಢ್ಯತೆಯ ಕಂದಕ ಮುಚ್ಚಿ ಸಮಾನತೆ ಮತ್ತು ಭಾತೃತ್ವದ ಸಮಾಜ ನಿರ್ಮಾಣಕ್ಕೆ ಯತ್ನ. | ನಾಟಕದ ಸಂಭಾಷಣೆ ಮೂಲಕ ಮೌಖಿಕ ಭಾಷಿಕ ಅಭಿವ್ಯಕ್ತಿ ಸಾಮರ್ಥ್ಯವನ್ನು ಗುರುತಿಸುವುದು. ನೇರ ಪ್ರಶ್ನೆಗಳ ಮೂಲಕ ಜ್ಞಾನ ಹಾಗೂ ಸಂದರ್ಭ ಸೂಚಿ ವಿವರ ಪ್ರಶ್ನೆಗಳ ಮೂಲಕ ಅಭಿವ್ಯಕ್ತಿ ಕೌಶಲವನ್ನು ಪರೀಕ್ಷಿಸುವುದು. | ನಾಟಕದ ಪಾತ್ರಗಳನ್ನು ಹಂಚಿ ತರಗತಿಗಳಲ್ಲಿ ಅಭಿನಯಿಸುವುದು. ಕಾಲೇಜ ವಾರ್ಷಿಕೋತ್ಸವದಲ್ಲಿ ರಂಗ ಪ್ರಯೋಗ ಹಾಗೂ ಸಂಭಾಷಣೆಯನ್ನು ಗದ್ಯರೂಪದಲ್ಲಿ ಬರೆಸುವುದು. |
| ೯. | ಅಲಂಕಾರ ಛಂದಸ್ಸು | ಅಲಂಕಾರ, ಛಂದಸ್ಸು ಅನುವಾದ | ೨೦ | ಪ್ರಾಚೀನ ಕನ್ನಡ ಕಾವ್ಯದ ಛಂದಸ್ಸು ಅಲಂಕಾರ ಶಾಸ್ತ್ರದ ಪರಿಚಯವನ್ನು ಮಾಡಿಕೊಡುವುದು. | ವಿವಿಧ ಛಂದೋರೂಪಗಳ ಪರಿಚಯ ಹಾಗೂ ಅಲಂಕಾರಗಳ ಪರಿಚಯವಾಗುತ್ತದೆ. | ನೇರ ಪ್ರಶ್ನೆಗಳ ಮೂಲಕ ಜ್ಞಾನ ನಿರ್ಧಾರ, ವಿವರಣಾತ್ಮಕ ಉತ್ತರಗಳ ಮೂಲಕ ಗ್ರಹಿಕೆ ಹಾಗೂ ಅಭಿವ್ಯಕ್ತಿ ಸಾಮರ್ಥ್ಯ ಪರೀಕ್ಷಿಸುವುದು. | ವಿವಿಧ ಛಂದೋರೂಪಗಳ ಪದ್ಯಗಳನ್ನು ರಾಗಬದ್ಧವಾಗಿ ಹಾಡಲು ಹೇಳುವುದು. |